MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 27-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದ ಅಕ್ಕಿ ದರ ಹೆಚ್ಚಳ

ಹಿಂದಿನ 5 ದಿವಸಗಳಲ್ಲಿ ಭಾರತದ ಅಕ್ಕಿ ದರ ದೇಶೀ ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿ ಹೆಚ್ಚಳವಾಗಿದೆ. ಬಾಂಗಾಳದೇಶ ಭಾರತದ ಅಕ್ಕಿ ಆಮದು ತೆರಿಗೆಯನ್ನು 62 ಶೇಕಡಾದಿಂದ 25 ಶೇಕಡಾಕ್ಕೆ ಇಳಿಸಿದೆಯೆನ್ನಲಾಗಿದೆ. ಇದರಿಂದ ಭಾರತದ ಭಾಸ್ಮತಿಯೇತರ ಅಕ್ಕಿ ದರ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಟನ್‌ಗೆ ರೂ.$350 ರಿಂದ $360 ಕ್ಕೆ ಹೆಚ್ಚಳಗೊಂಡಿದೆ. ದೇಸೀ ಮಾರುಕಟ್ಟೆಯಲ್ಲಿ ಅಕ್ಕಿ ದರ 10 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ.

## ಜಾಗತಿಕ ಜೋಳ, ಸೋಯಬೀನ್ ಉತ್ಪಾದನಾ ಅಂದಾಜು ಹೆಚ್ಚಳ

IGC (INTERNATIONAL GRAINS COUNCIL) ತನ್ನ ವರದಿಯಲ್ಲಿ ಜಾಗತಿಕ ಜೋಳ, ಸೋಯಬೀನ್ ಉತ್ಪಾದನಾ ಅಂದಾಜು ಈ ಹಿಂದಿನ ಮೇ ತಿಂಗಳ ಅಂದಾಜಿಗಿಂತ ಹೆಚ್ಚಳಗೊಳಿಸಿದೆ. ಸೋಯಬೀನ್ ಉತ್ಪಾದನಾ ಅಂದಾಜು ಹೆಚ್ಚಳವಿದ್ದರೂ 2020–2021 ನೇ ಸೀಸನ್‌ನ ಉತ್ಪಾದನೆಗಿಂತ ಇಳಿಕೆ ಅಂದಾಜು ಮಾಡಲಾಗಿದೆ. ಜಾಗತಿಕ ಸೋಯಬೀನ್ ದಾಸ್ತಾನು ಹಿಂದಿನ ಸೀಸನ್‌ಗಿಂತ ಇಳಿಕೆಯಾಗುವ ಅಂದಾಜು ಮಾಡಲಾಗಿದೆ.

## ಇದುವರೆಗೆ ಭಾರತದಿಂದ 3 ಮಿಲಿಯನ್ ಟನ್ ಗೋಧಿ ರಫ್ತು

ಭಾರತದಿಂದ ಈ ವರ್ಷ ಇದುವರೆಗೆ 30 ಲಕ್ಷ ಟನ್ ಗೋಧಿ ರಫ್ತು ಮಾಡಲಾಗಿದೆಯೆನ್ನಲಾಗಿದೆ. ನೇರ ವಿದೇಶಗಳ ಸರಕಾರಗಳಿಂದ ಬೇಡಿಕೆ ಬಂದಲ್ಲಿ ರಫ್ತು ಅವಕಾಶವಿದೆಯೆನ್ನಲಾಗಿದೆ. ವಿವಿಧ ದೇಶಗಳಿಂದ ಬೇಡಿಕೆ ಬಂದಿದೆಯೆನ್ನಲಾಗಿದ್ದು, ಪರಿಶೀಲಿಸಲಾಗುತ್ತಿದೆಯೆನ್ನಲಾಗಿದೆ. ಅದರಂತೆ ಕೆಲವು ದೇಶಗಳಿಗೆ ರಫ್ತು ಮಾಡಲು ಒಪ್ಪಿಗೆ ನೀಡಲಾಗಿದೆಯೆನ್ನಲಾಗಿದ್ದು, ಬಾಂಗ್ಲಾದೇಶ ಸೇರಿ 1.5 ಲಕ್ಷ ಟನ್ ಗೋಧಿ ರಫ್ತು ಮಾಡಲಾಗಿದೆಯೆನ್ನಲಾಗಿದೆ. ಸರಕಾರ ಹೆಚ್ಚುತ್ತಿರುವ ಗೋಧಿ ದೇಶೀ ದರ ನಿಯಂತ್ರಿಸಲು ರಫ್ತು ರದ್ದು ಮಾಡಿತ್ತು.

## ಲ್ಯಾಟಿನ್ ಅಮೇರಿಕಾದ ಸೋಯಾಬೀನ್ ಎಣ್ಣೆ ದರ ಇಳಿಕೆ

ಜಾಗತಿಕ ಬೇಡಿಕೆ ಇಳಿಕೆಯಿಂದ ಲ್ಯಾಟಿನ್ ಅಮೇರಿಕಾದ ಸೋಯಾಬೀನ್ ಎಣ್ಣೆ ದರಗಳು ಎಪ್ರಿಲ್‌ನಲ್ಲಿ ದಾಖಲೆ ಹೆಚ್ಚಳದ ದರದಿಂದ ಇಳಿಕೆಯಾಗಿ ರಷ್ಯಾ ಉಕ್ರೈನ್ ಯುದ್ಧ ಪೂರ್ವ ಇದ್ದ ದರಕ್ಕಿಯುತ್ತಿದೆಯೆನ್ನಲಾಗಿದೆ.